ದಿನಾಂಕ 16-11-2023 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ಮುಂದುವರೆದ ಪಾಟೀ ಸವಾಲು : ಎದುರುದಾರ ಪರ ಶ್ರೀ.ಹೆಚ್ ಹೆಚ್ ವಕೀಲರಿಂದ:

ಈ ಅರ್ಜಿಯನ್ನು ನಾನು ಮಗುವಿನ ಸುಪರ್ದಿ ಕೋರಿ ಹಾಕಿದ್ದೇನೆ. ನಾನು ನನ್ನ ಅರ್ಜಿಯಲ್ಲಿ ಮಗು ನನ್ನ ಜೊತೆ ಇದೆ ಎಂದು ಕಾಣಿಸಿದ್ದು ಮತ್ತು ಮಗುವನ್ನು 2 ನೇ ಅರ್ಜಿದಾರರಾಗಿ ಕಾಣಿಸಿದ್ದೇನೆ ಎಂದರೆ ನನಗೆ ಓದಲು ಬಾರದೇ ಇರುವ ಕಾರಣ ಆ ಬಗ್ಗೆ ಗೊತ್ತಿಲ್ಲ. ಮಗು ನನ್ನ ಜೊತೆ ಇದೆ ಮತ್ತು ಮಗುವನ್ನು 2 ನೇ ಅರ್ಜಿದಾರರನ್ನಾಗಿ ಕಾಣಿಸಲು ನನ್ನ ವಕೀಲರಿಗೆ ನಾನು ಮಾಹಿತಿ ಕೊಟ್ಟಿಲ್ಲ ಎಂದರೆ ಕೊಟ್ಟಿದ್ದೇನೆ. ನಾನು ನನ್ನ ಅರ್ಜಿಯಲ್ಲಿ ನನ್ನ ಕಡೆ ಮಗು ನನ್ನ ಬಳಿ ಇದೆ ಎಂದು ಹಾಗೂ ಪರಿಹಾರವನ್ನು ಕೋರುವಾಗ ಮಗುವಿನ ಸುಪರ್ದಿ ಕೊಡುವಂತೆ ಕೇಳಿದ್ದೇನೆ ಎಂದರೆ ಮಗು ನನ್ನ ಬಳಿ ಇದೆ ಎಂದು ನಾನು ಹೇಳಿಲ್ಲ, ನನ್ನ ಗಂಡನ ಬಳಿ ಮಗು ಇದೆ ಎಂದು ಹೇಳಿದ್ದು

ಮಗುವಿನ ಸುಪರ್ದಿಯನ್ನು ಕೊಡಿಸುವಂತೆ ಪರಿಹಾರ ಕೇಳಿದ್ದೇನೆ. ನಾನು ಸುಳ್ಳು ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 2018 ರಲ್ಲಿ ನಾನು ತವರು ಮನೆಗೆ ಬರುವಾಗ ಮಗುವಿಗೆ 3 ವರ್ಷ ವಯಸ್ಸಾಗಿತ್ತು. ಕೌಟುಂಬಿಕ ದೌರ್ಜನ್ಯ ಆಗಿದೆ ಎಂದು ದಾವಣಗೆರೆ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿ. ದಿನಾಂಕ 07-01-2021 ರಂದು ಎದುರುದಾರರು ವಿವಾಹ ವಿಚ್ಛೇದನೆ ಕೋರಿ ದಾವಣಗೆರೆ ಮಾನ್ಯ ಕೌಟುಂಬಿಕ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ ನಂತರ ಅವರಿಗೆ ವಿನಾ ಕಾರಣ ತೊಂದರೆ ಕೊಡಬೇಕೆಂದು ಕೌಟುಂಬಿಕ ದೌರ್ಜನ್ಯ ಕಾಯ್ದೆಯಡಿಯಲ್ಲಿ ನಾನು ಈ ಸುಳ್ಳು ಅರ್ಜಿಯನ್ನು ಈ ನ್ಯಾಯಾಲಯದಲ್ಲಿ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಣಗೆರೆಯಲ್ಲಿ ಇದ್ದಾಗ ಒಟ್ಟು ಕುಟುಂಬದಲ್ಲಿ ಸಂತೋಷವಾಗಿ ಇದ್ದೆ ಎಂದರೆ ಪ್ರತ್ಯೇಕವಾಗಿಯೇ ಇದ್ದೇವು. 2018 ರಲ್ಲಿ ಎಲ್ಲ ಎದುರುದಾರರು ಬೇರೆ ಬೇರೆಯಾಗಿದ್ದಾರೆ. ಆ ರೀತಿ ಬೇರೆಯಾದಾಗ ಎದುರುದಾರರ ತಾಯಿ ಮನೆಯಲ್ಲಿಯೇ ನಾನು ಮತ್ತು 1 ನೇ ಎದುರುದಾರರು ವಾಸ ಇದ್ದೇವು. ಆ ಸಮಯದಲ್ಲಿ ನಾನು, 1 ನೇ ಎದುರುದಾರರು, ನಮ್ಮ ಮಗು ಮತ್ತು ನನ್ನ ಅತ್ತೆ ಒಟ್ಟು ನಾಲ್ಕು ಜನ ಮಾತ್ರ ಜೊತೆಯಲ್ಲಿ ವಾಸ ಇದ್ದೇವು ಎಂದರೆ ಸರಿಯಲ್ಲ. 6 ಜನ ಇದ್ದೇವು. ನನ್ನ ಅತ್ತೆಗೆ ನನ್ನ ಗಂಡನ ಮೇಲೆ ಪ್ರೀತಿ ಇದ್ದ ಕಾರಣ ಅವರು ನಮ್ಮನ್ನು ಬಿಟ್ಟು ಹೋಗದೇ ನಮ್ಮ ಜೊತೆಯೇ ವಾಸ ಇದ್ದರು ಎಂದರೆ ಸರಿಯಲ್ಲ. ಈಗ ನಾನು ಮತ್ತು 1 ನೇ ಎದುರುದಾರರು ಹೊಂದಿಕೊಂಡು ಹೋಗಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ತೊಂದರೆ ಇಲ್ಲ, ಸಾಕ್ಷಿ ಮುಂದುವರೆದು ಈಗ 1 ನೇ ಎದುರುದಾರರು ಬೇರೆ ಮದುವೆ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನಾನು ಯಾರದ್ದೋ ಮಾತು ಕೇಳಿ 1 ನೇ ಎದುರುದಾರರಿಗೆ ಬೇರೆ ಮದುವೆಯಾಗಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಎದುರುದಾರರು ಎರಡನೇ ಮದುವೆಯಾಗಿದ್ದಾರೆ ಎಂದು ನನ್ನ ಅರ್ಜಿಯಲ್ಲಿ ಹೇಳಿ ಬರೆಯಿಸಿಲ್ಲ ಎಂದರೆ ನಾನು ಅರ್ಜಿ ಸಲ್ಲಿಸುವಾಗ ಅವರು ಎರಡನೇ ಮದುವೆಯಾಗಿರಲಿಲ್ಲ, ನಂತರ ಎರಡನೇ ಮದುವೆಯಾಗಿದ್ದಾರೆ. ಈ ಅರ್ಜಿ ಸಲ್ಲಿಸಿದ ನಂತರ ನಾನು 1 ನೇ ಎದುರುದಾರರೊಂದಿಗೆ ವಾಸ ಮಾಡಲು ಬಾಡಿಗೆ ಮನೆಯಲ್ಲಿದ್ದಾಗ ಅವರು ಎರಡನೇ ಮದುವೆಯಾಗಿದ್ದಾರೆ ಎಂಬ ಬಗ್ಗೆ ಪೊಲೀಸ್ ಠಾಣೆಗೆ ದೂರು ಕೊಡಲು ನನಗೆ ತೊಂದರೆ ಇರಲಿಲ್ಲ ಎಂದರೆ ನಾನು ದೂರು ಕೊಟ್ಟಿಲ್ಲ. ನನಗೆ ಮತ್ತು 1 ನೇ

ಎದುರುದಾರರಿಗೆ ಮಕ್ಕಳಿಲ್ಲ ಎಂಬುದು ಯಾವುದೇ ದೊಡ್ಡ ವಿಷಯವಾಗದೇ ಇದ್ದ ಕಾರಣ ನಾವು ಮಗುವನ್ನು ದತ್ತು ತೆಗೆದುಕೊಳ್ಳುವ ಇಚ್ಚೆ ಹೊಂದಿದ್ದೇವು ಎಂದರೆ ಸರಿ. ಮಗು ದತ್ತು ತೆಗೆದುಕೊಂಡ ನಂತರ ನಮ್ಮ ಸ್ವಂತ ಮಗುವಂತೆ ಸಾಕಿದೆವು ಎಂದರೆ ಸರಿ. ಮಗುವನ್ನು ದತ್ತು ತೆಗೆದುಕೊಂಡ ನಂತರ 1 ನೇ ಎದುರುದಾರರು ನನಗೆ ಸ್ವಂತ ಮಕ್ಕಳಿಲ್ಲದೇ ಇದ್ದರೂ ಸಹ ನನ್ನನ್ನು ಚೆನ್ನಾಗಿ ಅನ್ಯೋನ್ಯತೆಯಿಂದ ಮತ್ತು ಪ್ರೀತಿಯಿಂದ ನೋಡಿಕೊಂಡಿದ್ದರು ಎಂದರೆ ಸರಿ. 1 ನೇ ಎದುರುದಾರರು ನಾನು ಅವರ ಜೊತೆ ಇಲ್ಲ ಎಂಬ ಕಾರಣದಿಂದ ಮಾನಸಿಕವಾಗಿ ಖಿನ್ನತೆಗೆ ಒಳಗಾಗಿ ಯಾವುದೇ ಕೆಲಸವನ್ನು ಮಾಡದೇ ಮನೆಯಲ್ಲಿಯೇ ಉಂಡು ತಿಂದು ಇದ್ದಾರೆ ಎಂದರೆ ಸರಿಯಲ್ಲ. 1 ನೇ ಎದುರುದಾರರನ್ನು ಈಗ ಅವರ ಇಬ್ಬರು ಸಹೋದರರೇ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. 2018 ರಲ್ಲಿ ನಾನು 1 ನೇ ಎದುರುದಾರರ ಮನೆಯಿಂದ ವಾಪಸ್ಸು ಬಂದ ನಂತರ ಪುನಃ ನನ್ನ ತಾಯಿ ಮತ್ತು ಸಹೋದರರನ್ನು ಬಿಟ್ಟು ಅಲ್ಲಿಗೆ ಹೋಗಲಾಗದೇ ನೊಂದ ಕಾರಣ ಶಿವಮೊಗ್ಗದ ಮಾನಸ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ ಎಂದರೆ 1 ನೇ ಎದುರುದಾರರ ತಾಯಿ ನನಗೆ ಮಕ್ಕಳಾಗಿಲ್ಲ ಎಂಬ ಕಾರಣಕ್ಕಾಗಿ ಕೊಟ್ಟ ಕಿರುಕುಳದಿಂದ ನೊಂದು ಚಿಕಿತ್ಸೆ ಪಡೆದಿದಿದ್ದೇನೆ. ಮಕ್ಕಳಾಗಿಲ್ಲ ಎಂಬ ಒಂದೇ ಕಾರಣಕ್ಕಾಗಿ ಎದುರುದಾರರು ನನಗೆ ಚಿತ್ರ ಹಿಂಸೆ ಕೊಟ್ಟಿದ್ದಾರೆ ಎಂದು ನನ್ನ ಅರ್ಜಿಯಲ್ಲಿ ಹೇಳಿ ಬರೆಯಿಸಿದ್ದೇನೆ. ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದ ಬಗ್ಗೆ ಅರ್ಜಿಯಲ್ಲಿ ಬರೆಯಿಸಿದ್ದೇನೆ. ದಿನಾಂಕ 18-11-2019 ರಂದು ನಾನು ಆಸ್ಪತ್ರೆಗೆ ದಾಖಲಾಗಿದ್ದೆ. ಮೂರು ದಿನ ಒಳರೋಗಿಯಾಗಿದ್ದೆ. ನಾನು ಆಸ್ಪತ್ರೆಯಿಂದ ಬಿಡುಗಡೆಗೊಂಡ ನಂತರ 1 ನೇ ಎದುರುದಾರರಿಗೆ ಫೋನ ಕರೆ ಮಾಡಿದಾಗ ಅವರು ಹಾನಗಲ್ ಗೆ ಬಂದು ನನ್ನನ್ನು ನೋಡಿಕೊಂಡು ಎರಡು ದಿನ ಇದ್ದು ಹೋದರು ಎಂದರೆ ಸರಿಯಲ್ಲ, ಅವರು ನೋಡಲು ಬಂದಿಲ್ಲ.

(ಎದುರುದಾರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್